ಕರ್ನಾಟಕ ಸರ್ಕಾರ

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಬಿಟಿಇ/04/ಇಸಿಎಸ್(1)/2018

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-1,
ದಿನಾಂಕ: 30-03-2019

ಜ್ಞಾಪನ

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯ 2019 ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪ್ರಾಯೋಗಿಕ/ಥಿಯರಿ ಪರೀಕ್ಷೆಯ ಸಮಯದಲ್ಲಿ ಮುಖ್ಯ ಅಧೀಕ್ಷಕರು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಯ ಪ್ರಾಯೋಗಿಕ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಸಲು ನಿಗದಿಪಡಿಸಲಾಗಿದೆ.

ಪ್ರಾಯೋಗಿಕ ಪರೀಕ್ಷೆಗಳು: ದಿನಾಂಕ:04-04-2019 ರಿಂದ ದಿನಾಂಕ:16-04-2019 ರವರೆಗೆ

**ಥಿಯರಿ ಪರೀಕ್ಷೆಗಳು: ದಿನಾಂಕ:29-04-2019 ರಿಂದ ದಿನಾಂಕ:20-05-2019 ರವರೆಗೆ**

ಪ್ರಾಯೋಗಿಕ ಪರೀಕ್ಷರ ಪಟ್ಟಿಯನ್ನು ದಿನಾಂಕ: 01-04-2019ರಂದು ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್ ನಲ್ಲಿ ಪ್ರಕಟಿಸಲಾಗುವುದು. ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಪ್ರಾಯೋಗಿಕ ಪರೀಕ್ಷಕರುಗಳಿಗೆ ವಿದ್ಯಾರ್ಥಿಗಳ ಬ್ಯಾಚ್‌ಗಳನ್ನು ಹಂಚುವಾಗ ಅವರ ಸೇವಾ ಹಿರಿತನ ಮತ್ತು ಬೋಧನಾನುಭವಗಳನ್ನು ಪರಿಗಣಿಸಿ ವಿದ್ಯಾರ್ಥಿಗಳ ಬ್ಯಾಚ್‌ಗಳನ್ನು ಸಮರ್ಪಕವಾಗಿ ಹಂಚುವುದು ಮತ್ತು ಆಯಾ ದಿನದ ಪರೀಕ್ಷಾ ವೇಳಾಪಟ್ಟಿ, ಪಠ್ಯಕ್ರಮ/ಸ್ಕೀಂ ಆಫ್ ವ್ಯಾಲ್ಯುಯೇಷನ್ ಗಳನ್ನು ಸದರಿ ಪರೀಕ್ಷಕರಿಗೆ ನೀಡಿ ಅವರಿಂದ ಸಹಿ ಪಡೆಯಲು ಸೂಚಿಸಲಾಗಿದೆ.

ಪ್ರಾಯೋಗಿಕ ಪರೀಕ್ಷೆ ನಡೆಸುವ ಇಬ್ಬರೂ ಪರೀಕ್ಷಕರು ಪರೀಕ್ಷೆ ನಡೆಸಲು ಸಮಾನ ಹೊಣೆಗಾರರಾಗಿರುವ ಕಾರಣ, ಇಬ್ಬರೂ ಪರೀಕ್ಷಕರು ಒಟ್ಟಿಗೆ ಪರೀಕ್ಷಾ ಕೇಂದ್ರದ ಪ್ರಾಯೋಗಿಕ ಪರೀಕ್ಷೆಗಳ ಮುಖ್ಯ ಅಧೀಕ್ಷಕರಿಂದ ಪರೀಕ್ಷಾ ವೇಳಾಪಟ್ಟಿ, ಪಠ್ಯಕ್ರಮ/ಸ್ಕೀಂ ಆಫ್ ವ್ಯಾಲ್ಯುಯೇಷನ್ ಪಡೆದು, ಚರ್ಚಿಸಿ ನಿಷ್ಪಕ್ಷಪಾತ ಹಾಗೂ ಜವಾಬ್ದಾರಿಯಿಂದ ಪರೀಕ್ಷೆ ನಡೆಸಿ ಸ್ಕೀಂ ಆಫ್ ವ್ಯಾಲ್ಯುಯೇಷನ್ ಪ್ರಕಾರ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡಲು ತಿಳಿಸಲಾಗಿದೆ.

ಪ್ರಾಯೋಗಿಕ ಪರೀಕ್ಷೆಗಳನ್ನು ನಿಗದಿತ ಸಮಯದಲ್ಲಿ ನಡೆಸಿ, ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಮಾರ್ಕ್ಸ್‌ಲಿಸ್ಟ್‌ಗಳಲ್ಲಿನ ಅಂಕಗಳನ್ನು ಕಡ್ಡಾಯವಾಗಿ ಆಯಾ ದಿನದ ಅಂತ್ಯದಲ್ಲಿ ಕೀಯಿಂಗ್ ಮಾಡಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ಮುಖ್ಯ ಅಧೀಕ್ಷಕರುಗಳಿಗೆ ತಿಳಿಸಲಾಗಿದೆ. **ಪ್ರಾಯೋಗಿಕ ಪರೀಕ್ಷೆಗಳ ಮಾರ್ಕ್ಸ್‌ಲಿಸ್ಟ್ ಗಳನ್ನು ಬಣ್ಣದ ಬಟ್ಟೆಯಲ್ಲಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಪ್ರಾಯೋಗಿಕ ಪರೀಕ್ಷೆ ಮುಕ್ತಾಯವಾದ ತಕ್ಷಣವೇ ವಿಮೆ ಅಂಚೆ ಮೂಲಕ ಮಂಡಳಿಗೆ ಕಳುಹಿಸಿ ಕೊಡಲು ತಿಳಿಸಲಾಗಿದೆ.**

ಪ್ರಾಯೋಗಿಕ ಪರೀಕ್ಷೆ ಮುಕ್ತಾಯವಾದ ನಂತರ ಪ್ರಾಯೋಗಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಬಣ್ಣದ ಬಟ್ಟೆಯಲ್ಲಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ, **ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ಅಂದರೆ, ದಿನಾಂಕ:20-05-2019 ರೊಳಗೆ ವಿಮೆ ಅಂಚೆ ಮೂಲಕ ಮಂಡಳಿಗೆ ತಲುಪುವಂತೆ ಕಳುಹಿಸಿಕೊಡಲು ಸೂಚಿಸಲಾಗಿದೆ**.

**ಯಾವುದೇ ಕಾರಣಕ್ಕೂ ಪ್ರಾಯೋಗಿಕ ಪರೀಕ್ಷೆಯ ಬಂಡಲ್‌ಗಳನ್ನು ಥಿಯರಿ ಪರೀಕ್ಷೆ ನಡೆಸುವ ಅವಧಿಯಲ್ಲಿ ಕಳುಹಿಸಬಾರದೆಂದು ಮತ್ತೊಮ್ಮೆ ತಿಳಿಸಲಾಗಿದೆ.**

ಥಿಯರಿ ವಿಷಯದ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು, ಬೆಂಗಳೂರು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಆಯಾ ದಿನಾ ಸಂಜೆಯೇ ಮುದ್ದಾಂ ಆಗಿ ಮಂಡಳಿಗೆ ಸಲ್ಲಿಸುವುದು. ಹೊರಗಿನ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಆಯಾ ದಿನವೇ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಅಂಚೆ ವಿಮೆಯೊಂದಿಗೆ ಮಂಡಳಿಗೆ ಕಳುಹಿಸುವುದು (ಬಂಡಲ್‌ಗಳ ಮೇಲೆ "INSURED REGISTERED PARCEL" ಎಂದು ಬರೆಯುವುದು) ಮತ್ತು ಸದರಿ ಅಂಚೆ ರವಾನೆಯ ಪ್ರತಿ ದಿನದ ಟ್ರ್ಯಾಕಿಂಗ್ ವಿವರಗಳನ್ನು ಅಂಚೆ ಇಲಾಖೆಯಿಂದ ಪಡೆದು ಮಂಡಳಿಗೆ ನೀಡಲು ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ/ ಪ್ರಾಯೋಗಿಕ ಮತ್ತು ಥಿಯರಿ ಪರೀಕ್ಷೆಯ ಮುಖ್ಯ ಅಧೀಕ್ಷಕರುಗಳಿಗೆ -ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:
1. ಇ-ಗವರ್ನೆನ್ಸ್ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ – ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3. ಇಎಪಿ ವಿಭಾಗ
4. ಸಿಸ್ಟಂ ಅನಾಲಿಸ್ಟ್ – ಗಣಕ ಕೇಂದ್ರ
5. ಕಾಯದರ್ಶಿ.ಯವರ ಆಪ್ತಶಾಖೆ